
# ಜ್ಞಾನಶಕ್ತಿ
ಮಾಸ ಪತ್ರಿಕೆ
JNANASHAKTHI






## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ - 12 Reg. No. : KARBIL / 2005 / 16123 ಜುಲೈ - 2023 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ : 07 ಪ್ರಕಟಣೆ : 20-07-2023


## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ



ಮಂಗಳೂರು ನಿವಾಸಿ ಶ್ರೀ ರಾಜಾರಾಮ ಎನ್. ಎಸ್. ಮತ್ತು ಶ್ರೀಮತಿ ರಮಾವಾಣಿ ದಂಪತಿಗಳು ತಮ್ಮ ಸುಪುತ್ರ ಚಿ। ರಾಕೇಶ್ ಮತ್ತು ಚಿ। ಸೌ। ಪ್ರತೀಕ್ಷಾ ಇವರ ವಿವಾಹ ಮಂಗಲೋತ್ಸವ ಸವಿನೆನಪಿಗಾಗಿ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ₹ **1,00,000/-** (ರೂಪ್ಯಾ ಒಂದು ಲಕ್ಷ) ದೇಣಿಗೆಯನ್ನು ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭ ಶ್ರೀ ರಜತ್, ಶ್ರೀ ಸುಬ್ರಹ್ಮಣ್ಯ ಸಭಾ ಉಪಾಧ್ಯಕ್ಷರುಗಳಾದ ಡಾ। ಎ. ಪಿ. ಕೃಷ್ಣ, ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ನಿರ್ದೇಶಕರಾದ ಶ್ರೀ ರಘುವೀರ್ ಪೆರ್ಡೂರ್, ಶ್ರೀ ಉದಯ ಕುಮಾರ್ ಪಿ., ಶ್ರೀ ನಾಗರಾಜ್ ಐ. ಪಿ., ಶ್ರೀಮತಿ ವೈಜಯಂತಿ ಬೆಳ್ಳೆ ಉಪಸ್ಥಿತರಿದ್ದರು.

ಚಿತ್ರ : ಶ್ರೀ ರಘುವೀರ್ ಪೆರ್ಡೂರ್



ಚಿತ್ರ : ಶ್ರೀ ರಘುವೀರ್ ಪೆರ್ಡೂರ್

ಪುಣೆಯ ಶ್ರೀ ಪುರುಷೋತ್ತಮ ಸಾಂತೂರ್ಕರ್ ಸ್ಮರಣಾರ್ಥ ಅವರ ಮೊಮ್ಮಕ್ಕಳಾದ ಶ್ರೀ ಪ್ರಣವ್, ಶ್ರೀ ಸಿದ್ಧಾರ್ಥ್, ಶ್ರೀಮತಿ ಶಿಬಾನಿ, ಕು। ಇಶಾನಿ, ತಮ್ಮ ಅಜ್ಜಿ ಶ್ರೀಮತಿ ಪದ್ಮಲತಾ ಸಾಂತೂರ್ಕರ್ ಇವರ ಆಶಯದಂತೆ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ₹ **1,00,000/-** (ರೂಪ್ಯಾ ಒಂದು ಲಕ್ಷ) ದೇಣಿಗೆಯನ್ನು ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭ ಶ್ರೀ ವಿವೇಕ್ ಸಾಂತೂರ್ಕರ್, ಶ್ರೀಮತಿ ಮಮತಾ ಸಾಂತೂರ್ಕರ್, ಶ್ರೀ ಸುಬ್ರಹ್ಮಣ್ಯ ಸಭಾ ಉಪಾಧ್ಯಕ್ಷರುಗಳಾದ ಡಾ। ಎ. ಪಿ. ಕೃಷ್ಣ, ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ನಿರ್ದೇಶಕರಾದ ಶ್ರೀ ನಟರಾಜ್ ಎನ್. ಎಸ್., ಶ್ರೀಮತಿ ವೈಜಯಂತಿ ಬೆಳ್ಳೆ, ಮಹಿಳಾ ವೇದಿಕೆಯ ಶ್ರೀಮತಿ ಕುಸುಮಾ ನವೀನ್, ಶ್ರೀಮತಿ ಪುಷ್ಪಾ ಶ್ರೀನಿವಾಸ್, ಶ್ರೀಮತಿ ಸ್ನೇಹಲತಾ ದಿವಾಕರ್ ಉಪಸ್ಥಿತರಿದ್ದರು.



ಮಂಗಳೂರು ಕುಂಜತ್‌ಬೈಲ್ ನಿವಾಸಿ, ಪುಣಚ ಶ್ರೀ ರಾಜೇಂದ್ರ ರಾವ್ ಮತ್ತು ಶ್ರೀಮತಿ ರತ್ನ ದಂಪತಿಗಳು, ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ₹ **50,000/-** (ರೂಪ್ಯಾ ಐವತ್ತು ಸಾವಿರ) ದೇಣಿಗೆಯನ್ನು ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭ ಶ್ರೀ ಸುಬ್ರಹ್ಮಣ್ಯ ಸಭಾ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ನಿರ್ದೇಶಕರಾದ ಶ್ರೀ ರಘುವೀರ್ ಪೆರ್ಡೂರ್, CA ನಾಗರಾಜ್ ಶರ್ಮ ಉಪಸ್ಥಿತರಿದ್ದರು.

ಚಿತ್ರ : ಶ್ರೀ ರಘುವೀರ್ ಪೆರ್ಡೂರ್



## ಶ್ರೀ ಸುಬ್ರಹ್ಮಣ್ಯ ಸಭಾ (ರಿ.)

ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಮಂಗಳೂರು

ಸಮಾಜ ಬಾಂಧವರೇ,

**ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ**

ತಾ. **23-07-2023**ನೇ ಆದಿತ್ಯವಾರದಂದು



## 'ಆಟಿತೊ ಆಟ ಕೂಟ'

ಎಂಬ ವಿಶಿಷ್ಟ ಕಾರ್ಯಕ್ರಮ ನಡೆಯಲಿದೆ. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿಸುತ್ತೇವೆ.

ಅಧ್ಯಕ್ಷರು ಮತ್ತು ಸರ್ವ ಸದಸ್ಯರು
ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

### ಕಾರ್ಯಕ್ರಮಗಳು

ಬೆಳಗ್ಗೆ 8-30ರಿಂದ : ಉಪಾಹಾರ

ಬೆಳಗ್ಗೆ 9-00ರಿಂದ : ಕಲ್ಲಾಟ (ಪೊಕ್ಕು), ಕೇರಂ ಪಂದ್ಯಾಟ, ಚೆಸ್ ಪಂದ್ಯಾಟ ಚೆನ್ನೆಮಣೆ ಪಂದ್ಯಾಟ ಆರಂಭ (ಮುಕ್ತ ವಿಭಾಗ)

ಮಧ್ಯಾಹ್ನ 1-00ರಿಂದ : ಆಟಿಯ ವಿಶೇಷ ಖಾದ್ಯಗಳನ್ನೊಳಗೊಂಡ ಭೋಜನ

ಮಧ್ಯಾಹ್ನ 2-00ರಿಂದ : ಪರಿಸರಸ್ನೇಹಿ ತೆಂಗಿನ ನಾರಿನಿಂದ ಮಾಡಿದ ಚಟ್ಟಿಗಳ ಬಗ್ಗೆ ಪ್ರಾತ್ಯಕ್ಷಿಕೆ ಡಾಕ್ಟರ್ ಮೀರಾ ಮತ್ತು ಶ್ರೀಮತಿ ನಯನ ರಾವ್



ಮಧ್ಯಾಹ್ನ 2-30ರಿಂದ : ತುಳುನಾಡಿನ ಹಳ್ಳಿ ಉಡುಗೆ ಸ್ಪರ್ಧೆ (ಮುಕ್ತ ವಿಭಾಗ)

ಮಧ್ಯಾಹ್ನ 3-00ರಿಂದ : 'ಕರೋಕೆ' ರಸಮಂಜರಿ – ಸಮಾಜದ ಪ್ರತಿಭೆಗಳಿಂದ (ಟ್ರಾಕ್‌ಗಳಿಗೆ ಮಾತ್ರ ಅವಕಾಶ)

ಸಂಜೆ 4-30ರಿಂದ : ಬಹುಮಾನ ವಿತರಣೆ, ರಾಷ್ಟ್ರಗೀತೆ

ಬಹುಮಾನದ ಪ್ರಾಯೋಜಕರು : ಡಾ। ಜಯಲಕ್ಷ್ಮೀ

ವಿ. ಸೂ. : ಪಂದ್ಯಾಟದಲ್ಲಿ ಹಾಗೂ 'ಕರೋಕೆ' ರಸಮಂಜರಿಯಲ್ಲಿ ಭಾಗವಹಿಸುವವರು ದಯವಿಟ್ಟು ಮುಂಚಿತವಾಗಿ ತಮ್ಮ ಹೆಸರನ್ನು ನೋಂದಾಯಿಸಬೇಕಾಗಿ ವಿನಂತಿ.



**ಹೆಚ್ಚಿನ ಮಾಹಿತಿಗಾಗಿ :**

ಶ್ರೀ ಅನಿಲ್ ಎನ್. : **9448815172**
ಶ್ರೀ ಸುರೇಶ್ ಕಡಬ : **9972760673**
ಶ್ರೀಮತಿ ಕುಸುಮಾ ನವೀನ್ ಕುಮಾರ್ : **9480760904**
ಶ್ರೀಮತಿ ಪುಷ್ಪಾ ಶ್ರೀನಿವಾಸ್ : **9739155359**

## ಜ್ಞಾನಶಕ್ತಿ ಮಾಸ ಪತ್ರಿಕೆ

ಪ್ರಧಾನ ಸಂಪಾದಕರು :
ಎಂ. ಎಸ್. ರಘುನಾಥ ರಾವ್ ಪುತ್ತೂರು - 9448481696
ಸಂಪಾದಕರು : ಪಿ. ಶ್ರೀಕಾಂತ ರಾವ್ - 9343361618
ಸಂಪಾದಕ ಮಂಡಳಿ : • ನಾಗರಾಜ್ ವರ್ಕಾಡಿ • ರಘುವೀರ್ ಪೆರ್ಡೂರು
• ಟಿ. ಬಿ. ಮೋಹನ್ ರಾವ್ • ಸ್ವಾತಿ ಪ್ರಮೋದ್ ಕ್ಯಾದಿಗೆ
ಆರ್ಥಿಕ ಸಲಹಾ ಸಮಿತಿ : • ಕರುಣ್ ರಾವ್ ಬೆಳ್ಳೆ • ಅನಿಲ್ ರಾವ್ ಬಿ.ಎಸ್.
ಗೌರವ ಸಲಹೆಗಾರರು : • ಚೇತನ್ ಶರ್ಮ • ಶ್ರೀಮತಿ ಅರುಣಾ ಸೋಮಶೇಖರ್
ಪ್ರಕಾಶಕರು : ಹರ್ಷಕುಮಾರ್ ಕೇದಿಗೆ

: 7795116598 ✆ : 9343361618
e-mail : jnanashakthisss@gmail.com


## ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ

*'ಶಿವಸದನ' ವಸತಿ ನಿಲಯವು ಸುಮಾರು ರೂ. 5 ಕೋಟಿಗಳ ಯೋಜನೆ ಆಗಿದ್ದು, ದಾನಿಗಳಿಂದ ಉದಾರ ದೇಣಿಗೆಯನ್ನು ನಿರೀಕ್ಷಿಸುತ್ತಿದ್ದೇವೆ. ದಾನಿಗಳು ವಸ್ತುರೂಪದಲ್ಲೂ ದೇಣಿಗೆ ನೀಡಬಹುದು. ಹಿರಿಯ ನಾಗರಿಕರ ಸಸ್ಯಾಹಾರಿ ವಸತಿ ನಿಲಯದಲ್ಲಿ ಈಗಾಗಲೇ 40ಕ್ಕೂ ಹೆಚ್ಚು ನಿವಾಸಿಗಳಿದ್ದು, ಮಿತದರದಲ್ಲಿ ಎಲ್ಲಾ ಸಸ್ಯಾಹಾರಿಗಳಿಗೆ ಮುಕ್ತವಾಗಿರುತ್ತದೆ. ಅಪೇಕ್ಷಿತರಿಗೆ ಮಾಹಿತಿ ನೀಡಿ ಸಹಕರಿಸಿ.*

**ಶ್ರೀ ಕರುಣ್ ರಾವ್ ಬೆಳ್ಳೆ 7337634359 ❖ ಶ್ರೀ ಪಿ. ಶ್ರೀಕಾಂತ್ ರಾವ್ 7795116598**

## ಶೃಂಗೇರಿ ಯಾತ್ರೆ



ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಸ್ವಾಮೀಜಿಗಳ ಚಾತುರ್ಮಾಸ ಪ್ರಯುಕ್ತ ಶ್ರೀ ಸುಬ್ರಹ್ಮಣ್ಯ ಸಭಾದ ವತಿಯಿಂದ ಶೃಂಗೇರಿ ಯಾತ್ರೆಯನ್ನು ಆಯೋಜಿಸಲಾಗಿದೆ. ತಾರೀಕು 13–08–2023ನೇ ರವಿವಾರ ಬೆಳಗ್ಗೆ ಗಂಟೆ 6–30ಕ್ಕೆ ಶ್ರೀ ಸಭಾದಿಂದ ಬಸ್ಸಿನಲ್ಲಿ ಹೊರಟು, ಸಂಜೆಯ ವೇಳೆಗೆ ಹಿಂತಿರುಗುವುದು. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿ. ವ್ಯವಸ್ಥೆಯ ದೃಷ್ಟಿಯಿಂದ ಸಾಕಷ್ಟು ಮುಂಚಿತವಾಗಿ ತಮ್ಮ ಹೆಸರನ್ನು ನೋಂದಾಯಿಸಲು ಕೋರಲಾಗಿದೆ.

| **ಪ್ರವಾಸದ ಶುಲ್ಕ :** | **ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :** |
|---|---|
| ಒಬ್ಬರಿಗೆ – ರೂ. 500/– | ಶ್ರೀ ಅನಿಲ್ ಎನ್. ✆ : 9448815172 |
| ಮಕ್ಕಳಿಗೆ – ರೂ. 300/– (5ರಿಂದ 12 ವರ್ಷ) | ಶ್ರೀಮತಿ ಕುಸುಮಾ ನವೀನ್ ಕುಮಾರ್ ✆ : 9480760904 |

## ಕನ್ನಡ ಸಂಘದ ಕಾರ್ಯದರ್ಶಿಯಾಗಿ ಶ್ರೀ ಸುದೀಪ್ ಆಯ್ಕೆ



**ಶ್ರೀ ಸುದೀಪ್** ಇವರು ಸಿಂಗಾಪುರದ ಕನ್ನಡ ಸಂಘದ ಕಾರ್ಯದರ್ಶಿಯಾಗಿ ಆಯ್ಕೆಯಾಗಿರುತ್ತಾರೆ. ಇವರು ಈ ಸಂಘದಲ್ಲಿ ಕಳೆದ 5 ವರ್ಷಗಳಿಂದ ಖಜಾಂಚಿಯಾಗಿದ್ದರು. ಇವರು ಸಿಂಗಾಪುರದ 'ANZ' ಬ್ಯಾಂಕಿನ ಉದ್ಯೋಗಿ ಆಗಿದ್ದಾರೆ. ಇವರು ಪರ್ಕಳದಲ್ಲಿರುವ ಶ್ರೀ ರಾಮಚಂದ್ರ ಕೊಟ್ಟಾರಿ ಮತ್ತು ಶ್ರೀಮತಿ ಜ್ಞಾನೇಶ್ವರಿ ಇವರ ಪುತ್ರ.


ಪತ್ರಿಕೆಗೆ ಶುಭ ಬಯಸುವ–



**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ದೃತಿ ಮತ್ತು ದ್ರುವ್**

Phone : 0824 - 2440110, 2213946
**VISHRAM MOTORS (P.) LTD.**
**No. 4, Kodialbail Church Building**
**K. S. Rao Road, MANGALORE - 575 003**
*Authorised Dealers for :*
**Vijai Super GP 150 &**
**Vikram 3 Wheelers (Petrol & Diesel)**




## ಪ್ರಕಟಣೆ

**1**

2023–2024ನೇ ಸಾಲಿನಲ್ಲಿ ಪಿಯುಸಿ ಮತ್ತು ಮೇಲ್ಪಟ್ಟ ತರಗತಿಯಲ್ಲಿ ಕಲಿಯುವ ಸಮಾಜದ ಆರ್ಥಿಕವಾಗಿ ಹಿಂದಿರುವ ಕುಟುಂಬಗಳಿಂದ ಬರುವ ಅರ್ಹ ವಿದ್ಯಾರ್ಥಿಗಳಿಂದ ಸಾಮಾನ್ಯ ವಿದ್ಯಾರ್ಥಿವೇತನವನ್ನು ಪಡೆಯಲು ದಿನಾಂಕ 31–10–2023ರ ಒಳಗೆ ತಲುಪುವಂತೆ ಅರ್ಜಿಯನ್ನು **ಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು** ಇವರಿಗೆ ಕಳುಹಿಸಿಕೊಡಲು ಕೋರಲಾಗಿದೆ. ಅರ್ಜಿಯೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿ ಹಾಗೂ ಈ ವರ್ಷದ ಕಲಿಕಾ ಪ್ರಮಾಣಪತ್ರವನ್ನು ಲಗ್ತೀಕರಿಸಬೇಕು.

**ಅರ್ಜಿ ಫಾರ್ಮುಗಳು ದೊರೆಯುವ ವಿಳಾಸಗಳು ಈ ಕೆಳಗಿನಂತಿವೆ.**

- ❖ ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ, ಮಂಗಳೂರು, ಪುತ್ತೂರು, ಬೆಳ್ತಂಗಡಿ, ಸುರತ್ಕಲ್, ಸುಳ್ಯ, ಬಿ. ಸಿ. ರೋಡ್, ಕಾರ್ಕಳ ಹಾಗೂ ವಿಟ್ಲ ಶಾಖೆಗಳು
- ❖ ಶ್ರೀ ಕೆ. ಹರ್ಷಕುಮಾರ್, ಪ್ರಮೋದ್ ಆಟೋಮೊಬೈಲ್, ಕರಂಗಲ್ಪಾಡಿ, ಮಂಗಳೂರು
- ❖ ಶ್ರೀ ಬಿ. ಎಸ್. ಅನಿಲ್ ರಾವ್, ವಿಶ್ರಮ್ ಮೋಟರ್ಸ್, ಕೊಡಿಯಾಲ್‌ಬೈಲ್, ಮಂಗಳೂರು
- ❖ ಶ್ರೀ ಉಮೇಶ್ ಶಾನ್‌ಭಾಗ್, ಮೂಕಾಂಬಿಕಾ ಟಿಂಬರ್ಸ್, ಕಿರಿಮಂಜೇಶ್ವರ, ಕುಂದಾಪುರ
- ❖ ಸುಲಗ್ನ ಮಾಸಪತ್ರಿಕೆ, ಉಡುಪಿ ❖ ಶ್ರೀ ಶಾರದಾಮಂಟಪ, ಕುಂಜಿಬೆಟ್ಟು, ಉಡುಪಿ
- ❖ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನ, ಪಾವಂಜೆ
- ❖ ಶ್ರೀ ಶಾಲಿಪುರ ಸುಬ್ರಹ್ಮಣ್ಯ ದೇವಸ್ಥಾನ, ಕೊಕ್ರಾಡಿ, ಬೆಳ್ತಂಗಡಿ ತಾಲೂಕು
- ❖ ಶ್ರೀ ಎಂ. ಎಸ್. ಅರುಣ್ ಕುಮಾರ್, ದಿಶಾ ಬೇಕರಿ, ಉಜಿರೆ
- ❖ ಶ್ರೀ ದೇವಾನಂದ ಭಟ್, ಅಧ್ಯಕ್ಷರು, ಆದಿಶಂಕರ ಬ್ರಾಹ್ಮಣ ಸಭಾ, ಮೂಡಬಿದ್ರೆ
- ❖ ಶ್ರೀ ಕೇಶವ ರಾವ್, ಅಧ್ಯಕ್ಷರು, ಶಂಕರ ಪ್ರತಿಷ್ಠಾನ, ಕಾರ್ಕಳ, ಚತುರ್ಮುಖ ಬಸದಿ ಹತ್ತಿರ, ಕಾರ್ಕಳ
- ❖ ಶ್ರೀ ಹರಿಶ್ಚಂದ್ರ ರಾವ್, ಕಾರ್ಯದರ್ಶಿ, ಶಂಕರ ಪ್ರತಿಷ್ಠಾನ, ಕಾರ್ಕಳ
- ❖ ಶ್ರೀ ಎಂ. ಕೆ. ಮೋಹನ್ ರಾವ್, ಅಧ್ಯಕ್ಷರು, ಸ್ಥಾನಿಕ ಬ್ರಾಹ್ಮಣ ಸಂಘ, ಪಡುಬಿದ್ರೆ
- ❖ ಶ್ರೀ ಎನ್. ಕೆ. ಜಗನ್ನಿವಾಸ ರಾವ್, ವಕೀಲರು, ಪುತ್ತೂರು
- ❖ ಶ್ರೀ ಎಂ. ಎಸ್. ರಘುನಾಥ ರಾವ್, ರಾಜೇಶ್ ಪವರ್ ಪ್ರೆಸ್, ದರ್ಬೆ, ಪುತ್ತೂರು
- ❖ ಶ್ರೀ ಎನ್. ಎಸ್. ನಟರಾಜ್, ಪುತ್ತೂರು ❖ ಡಾ. ಸದಾಶಿವ ರಾವ್, ಜ್ಯೋತಿ ಆಸ್ಪತ್ರೆ, ಸುಳ್ಯ
- ❖ ಶ್ರೀ ಬಿ. ಭಾಸ್ಕರ್ ರಾವ್, ಬಾಯಂಬು, ಸುಳ್ಯ
- ❖ ಶ್ರೀ ತ್ರಿಶೂಲಿನಿ ದುರ್ಗಾಪರಮೇಶ್ವರೀ ದೇವಸ್ಥಾನ, ಬಳ್ಪ, ಸುಳ್ಯ ತಾಲೂಕು

ತಾ. 21–06–2023 **ಶ್ರೀ ಕರುಣ್ ರಾವ್ ಬೆಳ್ಳೆ,** ಕಾರ್ಯದರ್ಶಿ

**2** ಶ್ರೀ ಕೊಡ್ಲು ವಿಷ್ಣು ಶಾನ್‌ಭಾಗರು ತಮ್ಮ ಪತ್ನಿ ಶ್ರೀಮತಿ ಕೊಡ್ಲು ಪ್ರೇಮಾವತಿ ಅಮ್ಮ ಸ್ಮಾರಕ ನಿಧಿಯನ್ನು ರೂ. 1,05,000/– ವಂತಿಗೆಯೊಂದಿಗೆ ಸ್ಥಾಪಿಸಿ ವೈದ್ಯಕೀಯ ಶಿಕ್ಷಣ ಪಡೆಯುವ ನಮ್ಮ ಸಮಾಜದ ಓರ್ವ ವಿದ್ಯಾರ್ಥಿಗೆ ಪ್ರೋತ್ಸಾಹಧನವನ್ನು ಕೊಡಲು ಬಯಸಿದ್ದಾರೆ. ಅಂತೆಯೇ ಅವರು ತಮ್ಮ ಪುತ್ರ ಕೊಡ್ಲು ಕೇಶವ ಶಾನುಭಾಗರ ಸ್ಮಾರಕ ನಿಧಿಯನ್ನು ರೂ. 1,00,000/– ವಂತಿಗೆಯೊಂದಿಗೆ ಸ್ಥಾಪಿಸಿ CA ಕಲಿಯುವ ಸಮಾಜದ ಓರ್ವ ವಿದ್ಯಾರ್ಥಿಗೆ ಪ್ರೋತ್ಸಾಹಧನವನ್ನು ಕೊಡಲು ಬಯಸಿದ್ದಾರೆ.

2023–2024ನೇ ಸಾಲಿನ ಮೇಲಿನ ಎರಡು ನಿಧಿಗಳ ಪಾರಿತೋಷಕವನ್ನು ಶ್ರೀ ಸಭೆಯಲ್ಲಿ ಸ್ಕಾಲರ್ಸ್ ಡೇ ಸಂದರ್ಭದಲ್ಲಿ ವಿತರಿಸಲಾಗುವುದು. ಆದುದರಿಂದ ಸಮಾಜದ ಅರ್ಹ ವಿದ್ಯಾರ್ಥಿಗಳು ಮೇಲಿನ ಪ್ರೋತ್ಸಾಹಧನಕ್ಕೆ ಅರ್ಜಿಯನ್ನು ಬರೆದು ದಿನಾಂಕ 31–10–2023ರ ಒಳಗೆ ತಲುಪುವಂತೆ **ಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು** ಇವರಿಗೆ ಕಳುಹಿಸಿಕೊಡಲು ಕೋರಲಾಗಿದೆ. ಅರ್ಜಿಯೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿಯನ್ನು ಲಗ್ತೀಕರಿಸಬೇಕು.

ತಾ. 21–06–2023 **ಶ್ರೀ ಕರುಣ್ ರಾವ್ ಬೆಳ್ಳೆ,** ಕಾರ್ಯದರ್ಶಿ

**3** 2023–2024ನೇ ಸಾಲಿನಲ್ಲಿ ಶ್ರೀ ಸಭೆಯು ಸಮಾಜದ ಆರ್ಥಿಕವಾಗಿ ಹಿಂದಿರುವ ಕುಟುಂಬಗಳಿಂದ ಬರುವ ಅರ್ಹ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣವನ್ನು (ಬಿ.ಇ., ಎಂ.ಇ., ಎಂ.ಬಿ.ಬಿ.ಎಸ್., ಬಿ.ಡಿ.ಎಸ್., ಪಾಲಿಟೆಕ್ನಿಕ್, ಐ.ಟಿ.ಐ., ಎಂ.ಎ., ಎಂ.ಎಸ್.ಸಿ., ಎಂ.ಕಾಂ., ಸಿ.ಎ., ಬಿ.ಎಡ್., ಡಿ.ಎಡ್.) ಪಡೆಯಲು ಸಾಲ ವಿದ್ಯಾರ್ಥಿವೇತನವನ್ನು ವಿತರಿಸಲಿದೆ. ಈ ಸೌಲಭ್ಯವನ್ನು ಪಡೆಯಲು ಸಮಾಜದ ಅರ್ಹವಿದ್ಯಾರ್ಥಿಗಳು ಬಿಳಿ ಹಾಳೆಯಲ್ಲಿ **ಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು** ಇವರಿಗೆ ಅರ್ಜಿಯನ್ನು ಬರೆಯಲು ಕೋರಲಾಗಿದೆ. ಅರ್ಜಿಯೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿ ಹಾಗೂ ಈ ವರ್ಷದ ಕಲಿಕಾ ಪ್ರಮಾಣಪತ್ರವನ್ನು ಲಗ್ತೀಕರಿಸಬೇಕು.

ಈ ಹಿಂದೆ ಸಾಲ ವಿದ್ಯಾರ್ಥಿವೇತನವನ್ನು ಪಡೆದುಕೊಂಡ ವಿದ್ಯಾರ್ಥಿಗಳು ಶಿಕ್ಷಣವನ್ನು ಮುಂದುವರಿಸಲು 2023–2024ನೇ ಸಾಲಿನ ಕಂತನ್ನು ಪಡೆಯಲು ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ, ಮಂಗಳೂರು ಇವರನ್ನು ಸಂಪರ್ಕಿಸಲು ಕೋರಲಾಗಿದೆ.

ತಾ. 21–06–2023 **ಶ್ರೀ ಕರುಣ್ ರಾವ್ ಬೆಳ್ಳೆ,** ಕಾರ್ಯದರ್ಶಿ

**4** ಶ್ರೀಮತಿ ಶ್ಯಾಮಲ ಎಸ್. ರಾವ್ ತಮ್ಮ ಪತಿ ಶ್ರೀ ಎ. ಸೂರ್ಯಪ್ರಕಾಶ್ ರಾವ್ ಇವರ ಸ್ಮರಣಾರ್ಥ ನಮ್ಮ ಸಮಾಜದ ಬಡಕುಟುಂಬದಿಂದ ಬರುವ ಎಸ್.ಎಸ್.ಎಲ್.ಸಿ.ಯಲ್ಲಿ ಅತೀ ಹೆಚ್ಚು ಅಂಕಗಳಿಸಿರುವ ವಿದ್ಯಾರ್ಥಿಗೆ ಪ್ರೋತ್ಸಾಹಧನವನ್ನು ಕೊಡಲು ಬಯಸಿದ್ದಾರೆ.

2023–2024ನೇ ಸಾಲಿನ ಮೇಲಿನ ಪ್ರೋತ್ಸಾಹಧನವನ್ನು ಶ್ರೀ ಸಭೆಯಲ್ಲಿ ನಡೆಯುವ ಸ್ಕಾಲರ್ಸ್ ಡೇ ಸಂದರ್ಭದಲ್ಲಿ ವಿತರಿಸಲಾಗುವುದು. ಆದುದರಿಂದ ಸಮಾಜದ ಅರ್ಹ ವಿದ್ಯಾರ್ಥಿಗಳು ಮೇಲಿನ ಪ್ರೋತ್ಸಾಹಧನಕ್ಕೆ ಅರ್ಜಿಯನ್ನು ಬರೆದು ದಿನಾಂಕ 31–10–2023ರ ಒಳಗೆ ತಲುಪುವಂತೆ **ಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು** ಇವರಿಗೆ ಕಳುಹಿಸಿಕೊಡಲು ಕೋರಲಾಗಿದೆ. ಅರ್ಜಿಯೊಂದಿಗೆ ಎಸ್.ಎಸ್.ಎಲ್.ಸಿ.ಯ ಅಂಕಪಟ್ಟಿಯ ಪ್ರತಿಯನ್ನು ಲಗ್ತೀಕರಿಸಬೇಕು.

ತಾ. 21–06–2023 **ಶ್ರೀ ಕರುಣ್ ರಾವ್ ಬೆಳ್ಳೆ,** ಕಾರ್ಯದರ್ಶಿ

# ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ, ಬೆಳ್ತಂಗಡಿ ಇದರ ನೂತನ ಅಧ್ಯಕ್ಷರಾಗಿ ಮಿತ್ತಬಾಗಿಲು ಕಕ್ಕೆನೇಜಿ ಶ್ರೀ ಶಿವಾನಂದ ರಾವ್ ಆಯ್ಕೆ.

ದಿನಾಂಕ 29–06–2023ನೇ ಗುರುವಾರದಂದು ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ, ಬೆಳ್ತಂಗಡಿ ಇದರ ಮಹಾಸಭೆಯು ಲಾಯಿಲದಲ್ಲಿರುವ ಸಭಾದ ಸಭಾಭವನದಲ್ಲಿ ನಡೆಯಿತು. ಸಭಾದ ಅಧ್ಯಕ್ಷರಾದ ಶ್ರೀ ಪಿ. ರಾಧಾಕೃಷ್ಣ ರಾವ್‌ರವರ ಅಧ್ಯಕ್ಷತೆಯಲ್ಲಿ ನಡೆದ ಮಹಾಸಭೆಯಲ್ಲಿ ಮುಂದಿನ 2 ವರ್ಷಗಳ ಅವಧಿಗೆ ಅಧ್ಯಕ್ಷರಾಗಿ ಶ್ರೀ ಶಿವಾನಂದ ರಾವ್ ಕಕ್ಕೆನೇಜಿ, ಕಾರ್ಯದರ್ಶಿಯಾಗಿ ಶ್ರೀ ವಿಕಾಸ್ ರಾವ್ ಉಜಿರೆ ಆಯ್ಕೆಯಾದರು. ಉಪಾಧ್ಯಕ್ಷರುಗಳಾಗಿ ಶ್ರೀ ಪವನ್ ರಾವ್ ಚಾರ್ಮಾಡಿ, ಶ್ರೀ ಸೂರ್ಯಾನಂದ ರಾವ್ ಧರ್ಮಸ್ಥಳ, ಶ್ರೀ ಅನಿಲ್ ಅಧಿಕಾರಿ ಮಡಂತ್ಯಾರು, ಶ್ರೀ ರತ್ನಾಕರ ರಾವ್ ನಾರಾವಿ, ಶ್ರೀಮತಿ ನಾಗರತ್ನ ಉಮೇಶ್ ರಾವ್ ಕೊಲ್ಲಿಪಾಲು, ಜೊತೆ ಕಾರ್ಯದರ್ಶಿಯಾಗಿ ಶ್ರೀ ಕೃಷ್ಣ ಕುಮಾರ್ ಬೆಳ್ತಂಗಡಿ, ಕೋಶಾಧಿಕಾರಿಯಾಗಿ ಶ್ರೀಮತಿ ರೇಖಾ ಸುಧೀರ್, ಬೆಳ್ತಂಗಡಿ ಇವರುಗಳು ಆಯ್ಕೆಯಾದರು.

ಶ್ರೀ ಅರುಣ್ ಕುಮಾರ್ ಎಂ. ಎಸ್. ದಿಶಾ ಇವರು ನಮ್ಮ ಸಭಾ ನಡೆದುಬಂದ ದಾರಿ, ಕಳೆದ 2 ವರ್ಷದಲ್ಲಿ ಸಭಾದ ಮೂಲಕ ನಿರ್ವಹಿಸಲ್ಪಟ್ಟ ಅವಿಸ್ಮರಣೀಯ ಕಾರ್ಯಕ್ರಮಗಳ ಕುರಿತು ಪ್ರಸ್ತಾಪಿಸಿ ನಿರ್ಗಮನ ಸಮಿತಿಗೆ ಅಭಿನಂದನೆ ಸಲ್ಲಿಸಿದರು. 2 ವರ್ಷಗಳ ರಜತ ಸಂಭ್ರಮದಲ್ಲಿ ಸಹಕರಿಸಿದ ಎಲ್ಲರಿಗೂ ನಿರ್ಗಮನ ಅಧ್ಯಕ್ಷರಾದ ಶ್ರೀ ಪಿ. ರಾಧಾಕೃಷ್ಣ ರಾವ್ ಕೃತಜ್ಞತೆ ಸಮರ್ಪಿಸಿದರು.

ಇಂದಿನ ಕಾರ್ಯಕ್ರಮದಲ್ಲಿ ಸಮಾಜದ 23 ವಿದ್ಯಾರ್ಥಿಗಳಿಗೆ ರೂ. 2,30,000/– ಮೊತ್ತದ ವಿದ್ಯಾರ್ಥಿ ಪ್ರೋತ್ಸಾಹ ನಿಧಿಯನ್ನು ವಿತರಿಸಲಾಯಿತು. ಇಬ್ಬರು ಸದಸ್ಯರಿಗೆ ರೂ. 20,000/– ಮೊತ್ತದ ವೈದ್ಯಕೀಯ ನಿಧಿಯನ್ನು ನೀಡಲಾಯಿತು. ಈ ಎಲ್ಲಾ



ಮೊತ್ತವನ್ನು ಸಮಾಜದ ಸದಸ್ಯರೇ ಪ್ರಾಯೋಜಿಸಿರುತ್ತಾರೆ. 2022–23ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪಿಯುಸಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಶ್ರೀ ಪಿ. ಲಕ್ಷ್ಮೀನಾರಾಯಣ ರಾವ್ ನೇತೃತ್ವದಲ್ಲಿ ನೂತನ ಪದಾಧಿಕಾರಿಗಳಿಗೆ ಹೂಗುಚ್ಛ ನೀಡಿ ಶುಭಕೋರಲಾಯಿತು.

ಮಧ್ಯಾಹ್ನ ಮಹಾಸಭೆಗೆ ಆಗಮಿಸುತ್ತಿದ್ದಂತೆ ಶ್ರೀ ದಿನೇಶ್ ಕುಮಾರ್, ದಿಶಾ ಪ್ರಾಯೋಜಿಸಿದ ಸಮೋಸ ಹಾಗೂ ಬಿಸಿಬಿಸಿ ಬಾದಾಮಿ ಹಾಲು ಎಲ್ಲರನ್ನೂ ಸ್ವಾಗತಿಸಿತ್ತು. ಕಾರ್ಯಕ್ರಮದ ನಂತರ ಬಿಸಿಬಿಸಿ ಮಸಾಲೆ ದೋಸೆ, ಕಡ್ಲೆ ಅವಲಕ್ಕಿ, ಕ್ಷೀರ ತಿಂದು, ಚಾ–ಕಾಫಿ ಕುಡಿದು ಸಂಭ್ರಮಿಸಿದರು.

ಶ್ರೀಮತಿ ಶುಭಾ ವಿಕಾಸ್ ಇವರು ನಿರ್ವಹಿಸಿದ ಕಾರ್ಯಕ್ರಮದಲ್ಲಿ ಶ್ರೀ ಬಿ. ಕೆ. ಧನಂಜಯ ರಾವ್ ನಿರ್ದೇಶಕರ ಹಾಗೂ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಯನ್ನು ನಡೆಸಿಕೊಟ್ಟರು.

Muralidhara Rao Adyapadi
Proprietor
Mob : 94480 27259
99803 16434
SPANDANA
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO

PRAMOD
AUTOMOBILES
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

PREETHIKA
AUTOMOBILES
2493633
9845851573
Wholesale & Retail Dealers in :
2 & 3 WHEELERS, SPARES & ACCESSORIES
KARANGALPADY, MANGALORE - 575 003
Dealers in :
Minda Switches, M. K. Products, Swiss Auto Products, Power Coils

M.Devanand bhat
Mob: 9845644556
9663993883
Shobha Digital STUDIO
Belavai 08258-276177
Moodabidri 9901995655
Yedapadavu 0824-2256374
mdevanandbhat@gmail.com

ರಾಮಾ ಅಟೋಮೊಬೈಲ್ಸ್
ಮಾರುತಿ ವಾಹನ ತಜ್ಞರು
ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

ಪತ್ರಿಕೆಗೆ ಶುಭ ಬಯಸುವ –
ಇನ್ನ ಶ್ರೀನಿವಾಸ ರಾವ್ ಹಾಗೂ
ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್
ಮತ್ತು ಕುಟುಂಬ
ಶ್ರೀ ಗಣೇಶ ಕೃಪಾ, ಪೃಥ್ವೀ ಲೇಔಟ್, ಕೂಳೂರು, ಮಂಗಳೂರು - 575 013

Manish Rao U.
Tel : (O) 2223301
Mobile : 9448726499 / 8884284939
NAVA COMPUTERS
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services
1st Floor, Bharath Building, P. M. Rao Road, Hampankatta, Mangaluru - 575 001

Sharekhan
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028




## ‘ಶಿವಸದನ’, ಮುರ, ಪುತ್ತೂರು - 574 220







# ಒಂದು ಮನವಿ

ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ (ರಿ.) ಇವರು ಪುತ್ತೂರಿನ ಶಿವಬ್ರಾಹ್ಮಣ ಸಮಾಜಸೇವಾ ಸಂಘದ ‘ಶಿವಸದನ’ ಹಾಸ್ಟೆಲ್ ಕಟ್ಟಡವನ್ನು ಪಡೆದುಕೊಂಡು ಅದನ್ನು ತನ್ನ ಹೆಮ್ಮೆಯ ಯೋಜನೆಯಾಗಿ ರೂಪಿಸಿದೆ.

ಮೊದಲು ಲಿಫ್ಟ್ ಅಳವಡಿಸುವ ಉದ್ದೇಶದಿಂದ ಹಳೆಯ ಕಟ್ಟಡಕ್ಕೆ ನೆಲ ಮತ್ತು ಮೇಲಿನ ನಾಲ್ಕು ಅಂತಸ್ತುಗಳ ವಿಸ್ತೃತ ಕಟ್ಟಡವನ್ನು ರಚಿಸಲಾಯಿತು. ಈ ವಿಸ್ತೃತ ಕಟ್ಟಡದ ಪ್ರತಿ ಅಂತಸ್ತು 1100 ಚದರ ಅಡಿ ವಿಸ್ತೀರ್ಣವಿರುತ್ತದೆ. ನೆಲಅಂತಸ್ತಿನಲ್ಲಿ ಸ್ವಾಗತಚಾವಡಿ (**Reception Hall**) ಮತ್ತು ಆಫೀಸು ಕೊಠಡಿ ಇರುತ್ತದೆ. ಮೇಲಿನ ನಾಲ್ಕು ಅಂತಸ್ತಿನಲ್ಲಿ 575 ಚದರ ಅಡಿಗಳ ಸ್ಟುಡಿಯೋ ಅಪಾರ್ಟ್‌ಮೆಂಟ್ ಮತ್ತು ಒಂದು ಕೊಠಡಿಯನ್ನು ಸಜ್ಜುಗೊಳಿಸಲಾಗಿದೆ.

ಈ ನಿರ್ಮಾಣ ಕಾಮಗಾರಿಯು ಪೂರ್ಣಗೊಳ್ಳುತ್ತಿದ್ದಂತೆ ಹಳೆಯ ಕಟ್ಟಡಕ್ಕೆ 7000 ಚದರ ಅಡಿಗಳ ಮೂರನೆಯ ಹಾಗೂ ನಾಲ್ಕನೆಯ ಅಂತಸ್ತುಗಳನ್ನು ಸೇರಿಸುವ ಕೆಲಸವನ್ನು ಪ್ರಾರಂಭಿಸಲಾಯಿತು. ಈ ಅಂತಸ್ತುಗಳಲ್ಲಿ ವಿಶೇಷ ಚೇತನರಿಗೆ ನಿವಾಸವನ್ನು ನಿರ್ಮಿಸಲಾಗಿದೆ. ಸದ್ಯ 54 ಜನ ಹಿರಿಯ ನಾಗರಿಕರು ಮತ್ತು 56 ಜನ ವಿಶೇಷ ಚೇತನರು ಹಾಗೂ 30 ಜನ ಶುಶ್ರೂಷಕರು, ಸಹಾಯಕರು ಹೀಗೆ ಒಟ್ಟು 140 ನಿವಾಸಿಗಳಿಗೆ ವ್ಯವಸ್ಥೆ ಮಾಡಲಾಗಿದೆ.

ಐದು ಅಂತಸ್ತುಗಳಲ್ಲಿ ಒಟ್ಟು 40500 ಚದರ ಅಡಿಗಳ ವಿಸ್ತಾರದ ಕಟ್ಟಡ ಈಗಾಗಲೇ ನಿರ್ಮಾಣವಾಗಿರುತ್ತದೆ. ನಿವಾಸಿಗಳಿಗೆ ಅನುಕೂಲವಾಗುವಂತೆ 18 ಜನರಿಗೆ ಅವಕಾಶವಿರುವ ಲಿಫ್ಟ್ ಅಳವಡಿಸಲಾಗಿದೆ. ಈಗಾಗಲೇ 40 ಜನ ಹಿರಿಯ ನಾಗರಿಕರು ಹಾಗೂ ಸಹಾಯಕರು ನಿವಾಸಿಗಳಾಗಿದ್ದಾರೆ. ಆಗಸ್ಟ್ 2023ರ ಅಂತ್ಯದೊಳಗೆ ವಿಶೇಷ ಚೇತನರ ನಿವಾಸವನ್ನು ಪ್ರಾರಂಭಿಸಲಾಗುವುದು. ಈವರೆಗೆ ರೂ. 500 ಲಕ್ಷ ವೆಚ್ಚವಾಗಿದ್ದು, ಇದುವರೆಗೆ ರೂ. 300 ಲಕ್ಷ ಸಮಾಜ ಬಾಂಧವರಿಂದ ದೇಣಿಗೆಯಾಗಿ ಬಂದಿರುತ್ತದೆ.

21 ಜನ ಸಮಾಜ ಬಾಂಧವರು ರೂ. 5 ಲಕ್ಷದಂತೆ ದೇಣಿಗೆ ನೀಡಿ ತಮ್ಮ ಹಿರಿಯರ ಸ್ಮರಣಾರ್ಥ ಒಂದೊಂದು ಕೊಠಡಿಗಳನ್ನು ಪ್ರಾಯೋಜಿಸಿರುವರು. ಹಲವಾರು ಜನ ಸಮಾಜ ಬಾಂಧವರು ತಮ್ಮ ಮನೆಯಲ್ಲಿ ನೆರವೇರಿದ ವಿವಾಹಾದಿ ಶುಭ ಸಂದರ್ಭದಲ್ಲಿ ರೂ. 1 ಲಕ್ಷದಂತೆ ದೇಣಿಗೆ ನೀಡಿರುವರು. ಇದಲ್ಲದೇ ಹಲವಾರು ಸಮಾಜ ಬಾಂಧವರು ಸ್ವಯಂ ಪ್ರೇರಣೆಯಿಂದ ದೇಣಿಗೆ ನೀಡಿ ಬೆಂಬಲಿಸಿರುವರು. ಬಾಕಿ ಉಳಿದ ರೂ. 200 ಲಕ್ಷವನ್ನು ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘದಿಂದ ಸಾಲ ರೂಪದಲ್ಲಿ ಪಡೆದುಕೊಂಡು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಇನ್ನು ವಿದ್ಯುತ್ ಇಲಾಖೆಯಿಂದ **40 KVA** ವಿದ್ಯುತ್ ಮಂಜೂರಾತಿ ಪಡೆದುಕೊಂಡು ಟ್ರಾನ್ಸ್‌ಫಾರ್ಮರನ್ನು ಅಳವಡಿಸಬೇಕಾಗಿದೆ. ಈ ಬಾಕಿ ಉಳಿದಿರುವ ಕಾಮಗಾರಿಗಳಿಗೆ ಅಂದಾಜು ರೂ. 10 ಲಕ್ಷದ ಅಗತ್ಯ ಇರುತ್ತದೆ. ಹೀಗೆ ನಾವು ಉದ್ದೇಶಿಸಿದ ಯೋಜನೆಯನ್ನು ಸಂಪೂರ್ಣಗೊಳಿಸಲು ಒಟ್ಟು ರೂ. 210 ಲಕ್ಷಗಳ ಆವಶ್ಯಕತೆ ಇರುತ್ತದೆ.

ಇದುವರೆಗೆ ಆರ್ಥಿಕವಾಗಿ ಮಧ್ಯಮ ಹಾಗೂ ಕೆಳಮಧ್ಯಮ ವರ್ಗಗಳಿಂದ ಬಂದ ನಿವಾಸಿಗಳಿಗೆ ಕೈಗೆಟಕುವ ಮೊತ್ತವನ್ನು ಶುಲ್ಕವಾಗಿ ಪಡೆದುಕೊಂಡು ಸಂಸ್ಥೆಯನ್ನು ನಡೆಸಲಾಗುತ್ತಿದೆ. ಈಗಾಗಲೇ ಸಹಕಾರ ಸಂಘದಿಂದ ಪಡೆದು ಕೊಂಡ ಸಾಲವನ್ನು ಪೂರ್ಣವಾಗಿ ಮರುಪಾವತಿಸಿದ ಬಳಿಕ ಸಮಾಜದ ದುರ್ಬಲ ವರ್ಗದ ಜನರಿಗೆ ಉಚಿತವಾಗಿ 10 ಶೇಕಡಾ ಸ್ಥಳಾವಕಾಶವನ್ನು ಕೊಡುವ ಸದುದ್ದೇಶವಿದೆ.

ಈ ಯೋಜನೆಯು ಅಂತಿಮ ಹಂತದಲ್ಲಿದ್ದು, ರೂ. 210 ಲಕ್ಷ ಸಂಗ್ರಹಿಸುವ ನಮ್ಮ ಗುರಿಯನ್ನು ಪೂರ್ಣಗೊಳಿಸಿ ಮುಂದಿನ ದಿನಗಳಲ್ಲಿ ಸಮಾಜಕ್ಕೆ ಅತೀ ಅಗತ್ಯವೆನಿಸುವ ಈ ಯೋಜನೆಗೆ ಎಲ್ಲಾ ಸಮಾಜ ಬಾಂಧವರು ಉದಾರವಾಗಿ ಬೆಂಬಲಿಸಿ 'ಶಿವಸದನ'ವು ಸಮಾಜಕ್ಕೆ ಉಪಯುಕ್ತ ಸಂಸ್ಥೆಯಾಗಿ ಅರಳಲು ಸಹಕರಿಸಬೇಕಾಗಿ ವಿನಂತಿ.

**ಅಧ್ಯಕ್ಷರು ಹಾಗೂ ಸರ್ವ ಸದಸ್ಯರು**

ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಕೊಡಿಯಾಲ್‌ಬೈಲ್, ಮಂಗಳೂರು - 575 003

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ :

ಶ್ರೀ ಕರುಣ್ ರಾವ್ ಬೆಳ್ಳೆ : ✆ : 7337634359

ಶ್ರೀ ಪಿ. ಶ್ರೀಕಾಂತ್ ರಾವ್ : ✆ : 7795116598









ಛಾಯಾಚಿತ್ರ : ಶ್ರೀ ರಘುವೀರ್ ಪೆರ್ಡೂರ್




Relax with the whole family at this peaceful place to stay with all major attractions at a short distance. Enjoy the sea waves at Malpe beach within 5KM drive. Seak blessing at the famous Srikrishna Temple and Anantheshwara Temple which is just 2KM. Perfect place for hosting wedding guests with major wedding venues and convention halls near by.

## SUMIRASA - Full Villa in Udupi for Stay

### WHAT THIS PLACE OFFERS

- GARDEN VIEW
- BATHROOM
  Cleaning products, Bidet, Hot water
- BEDROOM AND LAUNDRY
  Free washing machine
- ESSENTIALS
  Towels, bed sheets, soap, Hangers
- BED LINEN
  Cotton linen
- CLOTHES DRYING RACK
- CLOTHES STORAGE: Wardrobe and drawers
- ENTERTAINMENT
  TV and Books and reading material
- HEATING AND COOLING
  AC – split-type ductless system, Ceiling fan
- INTERNET AND OFFICE
  Wifi
- KITCHEN AND DINING
  Kitchen Space where guests can cook
- REFRIGERATOR
- COOKING BASICS
- DISHES AND SILVERWARE








For Booking Contact : +91 98220 28537

You can also visit https://www.airbnb.co.in/rooms

## ಅಪಾರಕೀರ್ತಿ ಗಳಿಸಿ...



ಮಡಂತ್ಯಾರು ಶ್ರೀ ಶರತ್ ಅಧಿಕಾರಿ ಮತ್ತು ಶ್ರೀಮತಿ ಶೋಭಿತಾ ಅಧಿಕಾರಿ ಇವರ ಸುಪುತ್ರ **ಚಿ। ಶಿಶಿರ್ ಅಧಿಕಾರಿ** ರಾಷ್ಟ್ರಮಟ್ಟದ ಸ್ಪೆಲ್ ಬಿ. ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

❊❊❊



**ಶ್ರೀ ತನ್ಮಯ್ ರಾವ್** ಈ ಬಾರಿಯ ಕೊನೆಯ E & C ಇಂಜಿನಿಯರಿಂಗ್ ಪರೀಕ್ಷೆಯಲ್ಲಿ 9.67 CGPA ಪಡೆದು, ಮೂರನೇ ರ್‍ಯಾಂಕ್ ಗಳಿಸಿದ್ದಾನೆ. ಇವನು ವಿಟ್ಲ ಶ್ರೀ ಹರೀಶ್ ಕುಮಾರ್ ಮತ್ತು ಶ್ರೀಮತಿ ಜಯಂತಿ ರಾವ್‌ರವರ ಸುಪುತ್ರ ಹಾಗೂ ಪುತ್ತೂರಿನ ವಿವೇಕಾನಂದ ಕಾಲೇಜಿನ ವಿದ್ಯಾರ್ಥಿ.

❊❊❊

ಮೋರಜೆ ಶ್ರೀ ದೇವರಾಯ ರಾವ್ ಮತ್ತು ದಿ। ಸುನಂದ ರಾವ್ ಹಾಗೂ ಪುತ್ತೂರಿನ ಶ್ರೀ ಎನ್. ಕೆ. ಜಗನ್ನಿವಾಸ್ ರಾವ್ ಮತ್ತು ಶ್ರೀಮತಿ ಗೀತಾಮಣಿ ಇವರ ಮೊಮ್ಮಗಳು **ಕು। ಸಿಂಚನ ರಾವ್ ಎಂ. ಆರ್.** ಇವಳು CBSE 10th ಬೋರ್ಡ್ 2022–23ರ ಪರೀಕ್ಷೆಯಲ್ಲಿ 96.4% ಅಂಕವನ್ನು ಪಡೆದಿದ್ದಾಳೆ. ಇವಳು ಶ್ರೀ ರಾಘವೇಂದ್ರ ರಾವ್ ಎಂ. ಡಿ. ಮತ್ತು ಶ್ರೀಮತಿ ಶ್ವೇತಾ ರಾಘವೇಂದ್ರ ರಾವ್ ಇವರ ಸುಪುತ್ರಿ.

## ಉಪನಯನ

ಶ್ರೀ ರಾಘವೇಂದ್ರ ಪ್ರಸಾದ್ ಶಾನುಭೋಗ್ ಮತ್ತು ಶ್ರೀಮತಿ ಹರ್ಷಿತಾರವರ ಸುಪುತ್ರ **ಚಿ। ಸ್ತವೀರ**ರವರ ಉಪನಯನ ಬೆಂಗಳೂರಿನ ಕೂಡಿಗೆಹಳ್ಳಿ ಜ್ಞಾನಶಕ್ತಿ ಮಂಟಪದಲ್ಲಿ ನಡೆಯಿತು.

❊❊❊

ಶ್ರೀ ವಾಗೀಶ್ ಎಚ್. ಜಿ. ಮತ್ತು ಶ್ರೀಮತಿ ಶುಭಾರವರ ಸುಪುತ್ರ **ಚಿ। ರಿಷಬ್ ರಾವ್** ಇವರ ಉಪನಯನ ತಾ. 21–6–2023ರ ಬುಧವಾರ ಬೆಂಗಳೂರಿನ ಪೂರ್ಣಪ್ರಜ್ಞಾ ವಿದ್ಯಾಪೀಠದಲ್ಲಿ ನಡೆಯಿತು.

Prop. : SUDHAKAR BELLE
✆ : 9845193103/ 9481563103
KARAN DIGITAL STUDIO
Sadasukh Building Opp. Busstand
Nr. Postoffice, Padubidri - 574 111 Belman
All Marriage & Other functions
Photography & Videography Available

ಜ್ಞಾನಾರ್ಜನೆಯ ಗುರಿಯೊಂದಿಗೆ
'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳ ಬೆಳಗಲಿ!
ಶುಭಾಶಯಗಳೊಂದಿಗೆ –
G. K. KOLPE
House No. 7-3-31-D1, 'Vaishnavi' (Upstairs)
Vadiraja 2nd Cross, Bailakere, Udupi - 576 101
Mobile : 9449903002

ಪತ್ರಿಕೆಗೆ ಶುಭ ಬಯಸುವ–
ಡಾ. ದಿವಾಕರ್ ರಾವ್ ಹಾಗೂ
ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

ಪತ್ರಿಕೆಗೆ ಶುಭ ಬಯಸುವ–
ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು
ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ
ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ

PRAVEEN KUMAR ADYAPADY
NOTARY & ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles,
A.C., D.C. Cases, Land Conversion, Registration etc.

## ಶುಭವಿವಾಹ

ಕಾಸರಗೋಡು ಮಣ್ಣಿಪ್ಪಾಡಿ ಶ್ರೀಮತಿ ಅನಿತಾ ಮತ್ತು ಶ್ರೀ ತೇಜಸ್ವಿ ವ್ಯಾಸ ಇವರ ಸುಪುತ್ರ **ಚಿ। ಅಮಿತ್ ವ್ಯಾಸ** ಹಾಗೂ ಮಂಕುಡೆ ಶ್ರೀ ಸೂರ್ಯನಾರಾಯಣ ಇವರ ಸುಪುತ್ರಿ **ಚಿ। ಸೌ। ಅಪೂರ್ವ** ಇವರ ವಿವಾಹವು ತಾ. 9–7–2023ನೇ ರವಿವಾರ ಉಡುಪಿಯ 'ಶಾಮಿಲಿ ಸಭಾಭವನ'ದಲ್ಲಿ ನಡೆಯಿತು.

❊❊❊

ಮಂಗಳೂರಿನ ಶ್ರೀ ಎನ್. ಎಸ್. ರಾಜಾರಾಂ ಮತ್ತು ಶ್ರೀಮತಿ ರಮಾವಾಣಿ ಇವರ ಸುಪುತ್ರ **ಚಿ। ರಾಕೇಶ್** ಹಾಗೂ ಬೆಂಗಳೂರಿನ ಶ್ರೀ ಪಿ. ಮುರಳೀಧರ್ ಮತ್ತು ಶ್ರೀಮತಿ ಮಮತಾರವರ ಸುಪುತ್ರಿ **ಚಿ। ಸೌ। ಪ್ರತೀಕ್ಷಾ** ಇವರ ವಿವಾಹ ತಾ. 25–6–2023ರ ರವಿವಾರ ಮಂಗಳೂರಿನ ಸಂಘನಿಕೇತನದಲ್ಲಿ ನಡೆಯಿತು.

❊❊❊

ಶ್ರೀಮತಿ ಸರೋಜಿನಿ ಮತ್ತು ಎಲ್ಲೂರು ಶ್ರೀ ಶಾಂತಿನಾಥ್ ರಾವ್ ಇವರ ಸುಪುತ್ರ **ಚಿ। ಮಹೇಶ್ ರಾವ್ ವಿ.** ಹಾಗೂ ಶ್ರೀಮತಿ ಹರಿಣಿ ಮತ್ತು ದಿ। ನಾಗರಾಜ್ ಶಾನುಭೋಗ್‌ರವರ ಸುಪುತ್ರಿ **ಚಿ। ಸೌ। ಅಪೂರ್ವ** ಇವರ ವಿವಾಹ ತಾ. 12–6–2023ನೇ ಸೋಮವಾರ ಉಡುಪಿಯ 'ಸರಸ್ವತಿ ಸಭಾಭವನ'ದಲ್ಲಿ ನಡೆಯಿತು.

❊❊❊

ಅಳುಗ್ಗೇಲು ಶ್ರೀಮತಿ ಮೋಹಿನಿ ಮತ್ತು ದಿ। ರವಿಶಂಕರ್ ರಾವ್ ಇವರ ಸುಪುತ್ರ **ಚಿ। ವಿಜೇತ್** ಹಾಗೂ ಇನ್ನ ಕಲ್ಲಬ್ಬ ಶ್ರೀಮತಿ ಆಶಾ ಮತ್ತು ಶ್ರೀ ಸುರೇಶ್ಚಂದ್ರ ರಾವ್ ಇವರ ಸುಪುತ್ರಿ **ಚಿ। ಸೌ। ಕಮಲಿನಿ** ಇವರ ವಿವಾಹವು ತಾ. 9–07–2023ನೇ ರವಿವಾರ ಏರ್ಮಾಳು 'ಶ್ರೀ ಜನಾರ್ಧನ ಜನಕಲ್ಯಾಣ ಸಭಾಂಗಣ'ದಲ್ಲಿ ನಡೆಯಿತು.

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



ಕದ್ರಿ ನಿವಾಸಿ, ನಂದಾವರ **ಶ್ರೀ ರಮೇಶ್ ರಾವ್** (86) ತಾರೀಕು 15–5–2023ರ ಸೋಮವಾರ ಮಂಗಳೂರಿನಲ್ಲಿ ನಿಧನ ಹೊಂದಿದರು. ಅವರು ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿದ್ದಾರೆ.

❖❖❖




ನೆಟ್ಲ ದಿ। ಗೋಪಾಲಕೃಷ್ಣ ರಾವ್‌ರವರ ಧರ್ಮಪತ್ನಿ **ಶ್ರೀಮತಿ ಪ್ರೇಮಲತಾ ರಾವ್** (76) ತಾ. 26–6–2023 ಸೋಮವಾರ ಸುಳ್ಯದಲ್ಲಿ ನಿಧನ ಹೊಂದಿದರು. ಅವರು ಓರ್ವ ಪುತ್ರ, ಮೂವರು ಪುತ್ರಿಯರನ್ನು ಅಗಲಿದ್ದಾರೆ.

❖❖❖



ಪರಾರಿ ಶ್ರೀ ದಿವಾಕರ್ ರಾವ್‌ರವರ ಧರ್ಮಪತ್ನಿ **ಶ್ರೀಮತಿ ರಾಜೇಶ್ವರಿ ರಾವ್** (69) ತಾ. 28–6–2023ರ ಬುಧವಾರ ಬೆಂಗಳೂರಿನಲ್ಲಿ ನಿಧನ ಹೊಂದಿದರು. ಅವರು ಪತಿ, ಇಬ್ಬರು ಪುತ್ರರನ್ನು ಅಗಲಿದ್ದಾರೆ.

❖❖❖



ಅದ್ಯಪಾಡಿ **ಶ್ರೀ ಶ್ರೀನಿವಾಸ ರಾವ್** (91), ತಾ. 30–6–2023ನೇ ಶುಕ್ರವಾರ ಮುಂಬಯಿಯಲ್ಲಿ ನಿಧನ ಹೊಂದಿದರು. ಅವರು ಶ್ರೀ ಸುಬ್ರಹ್ಮಣ್ಯ ಸಭಾ, ಮುಂಬಯಿಯ ಮಾಜಿ ಅಧ್ಯಕ್ಷರಾಗಿ ಮತ್ತು BSKBA ಇದರ ಸಕ್ರಿಯ ಪದಾಧಿಕಾರಿಯಾಗಿದ್ದರು. ಅವರು ಇಬ್ಬರು ಪುತ್ರರು ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

❖❖❖



ಮಂಗಳೂರು ನಿವಾಸಿ **ಶ್ರೀಮತಿ ಜಾನಕಿ ಶರ್ಮ** (77) ತಾ. 11–7–2023ನೇ ಮಂಗಳವಾರ ನಿಧನ ಹೊಂದಿದರು. ಇವರು ಓರ್ವ ಪುತ್ರ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

❖❖❖




ಡಾ। ಟಿ. ರಾಧಾಕೃಷ್ಣ ರಾವ್ ಇವರ ಧರ್ಮಪತ್ನಿ ಕದ್ರಿ ಶಿವಭಾಗ್ ನಿವಾಸಿ **ಶ್ರೀಮತಿ ಅನ್ನಪೂರ್ಣ** (73) ಇವರು ತಾರೀಕು 13–07–2023ನೇ ಗುರುವಾರ ಮಂಗಳೂರಿನಲ್ಲಿ ನಿಧನ ಹೊಂದಿದರು. ಅವರು ಪತಿ, ಇಬ್ಬರು ಗಂಡು ಮಕ್ಕಳನ್ನು ಅಗಲಿದ್ದಾರೆ.

ಪತ್ರಿಕೆಗೆ ಶುಭ ಬಯಸುವ–
ಶ್ರೀ ಸೋಮಶೇಖರನ್
ಮತ್ತು
ಶ್ರೀಮತಿ ಅರುಣಾ ಸೋಮಶೇಖರನ್
ಚಿಲಿಂಬಿ, ಮಂಗಳೂರು

# ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಬಂಟ್ವಾಳ ವಲಯ, ವಿಟ್ಲ – ಮಹಾಸಭೆ

ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಬಂಟ್ವಾಳ ವಲಯ – ವಿಟ್ಲ ಇದರ 19ನೇ ವರ್ಷದ ಮಹಾಸಭೆಯು ಸಭಾ ಅಧ್ಯಕ್ಷರಾದ ಶ್ರೀಯುತ ಅನಾರು ಕೃಷ್ಣಶರ್ಮರ ಅಧ್ಯಕ್ಷತೆಯಲ್ಲಿ ತಾ. 25–06–2023ನೇ ಭಾನುವಾರ ಬಿ. ಸಿ. ರೋಡಿನ ಕನ್ನಡ ಭವನದಲ್ಲಿ ನೆರವೇರಿರುತ್ತದೆ. ಸುಮಂಗಲಿಯರಿಂದ ದೀಪಪ್ರಜ್ವಲನೆ ನಡೆಸಿ, ಬಳಿಕ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ ಪಠಿಸಲಾಯಿತು. ಕುಮಾರಿ ವಿದ್ಯಾಲಕ್ಷ್ಮಿಯ ಪ್ರಾರ್ಥನೆಯೊಂದಿಗೆ ಮಹಾಸಭೆ ಪ್ರಾರಂಭವಾಗಿರುತ್ತದೆ. ಶ್ರೀಯುತ ಸಂತೋಷ ರಾವ್ ಕಾವಳಕಟ್ಟೆಯವರು ವೇದಿಕೆಗೆ ಸಭಾ ಮತ್ತು ಪ್ರತಿಷ್ಠಾನದ ಪದಾಧಿಕಾರಿಗಳನ್ನು ಆಹ್ವಾನಿಸಿದರು. ಶ್ರೀಯುತ ಹರೀಶ್ ಕುಮಾರ್ ವಿ. ಎಲ್ಲರಿಗೂ ಸ್ವಾಗತ ಕೋರಿದರು. ಶ್ರೀಯುತ ನಿತಿನ್ ಕುಮಾರ್ ಪ್ರಸ್ತಾವನೆ ನೆರವೇರಿಸಿದ ಬಳಿಕ, ವರದಿ ವರ್ಷದಲ್ಲಿ ಮೃತರಾದ ತಾಲೂಕಿನ ಸಮಾಜ ಬಾಂಧವರಿಗೆ ಸಂತಾಪ ಸೂಚಿಸಲಾಯಿತು. ಕಾರ್ಯದರ್ಶಿಯವರಾದ ಶ್ರೀ ಶ್ರೀಧರ ರಾವ್ ನೆಟ್ಲರವರು ಮಹಾಸಭೆಯ ತಿಳುವಳಿಕೆ ಪತ್ರವನ್ನು ಓದಿ ವಾರ್ಷಿಕ ವರದಿಯನ್ನು ಮಂಡಿಸಿದರು. ಸಭೆಯ ಲೆಕ್ಕಪತ್ರವನ್ನು ಕೋಶಾಧಿಕಾರಿ ಶ್ರೀಯುತ ರಮೇಶ ರಾವ್ ವಗ್ಗ ಮಂಡಿಸಿದರು. ಶ್ರೀಯುತ ಪದ್ಮನಾಭ ರಾಯರು ವಿದ್ಯಾನಿಧಿಗೆ 25,000/– ರೂ.ಗಳ ಚೆಕ್ಕನ್ನು ಹಸ್ತಾಂತರಿಸಿ, ವಿದ್ಯಾರ್ಥಿವೇತನ ಪಡೆದ ಎಲ್ಲ ಮಕ್ಕಳಿಗೂ ಹಾಗೂ ಸಭಾ ಮಾಡುತ್ತಿರುವ ಉತ್ತಮ ಕೆಲಸಗಳಿಗೆ ಪ್ರೋತ್ಸಾಹದಾಯಕ ಮಾತುಗಳಿಂದ ಹುರಿದುಂಬಿಸಿದರು. ಶಿಕ್ಷಣ ಸಮಿತಿಯ ವತಿಯಿಂದ ಶ್ರೀಮತಿ ಶಾರದಾ ಸುಕುಮಾರ ರಾವ್ ಹಾಗೂ ಶ್ರೀಮತಿ ಅರುಣಾ ಶಿವರಾಮ ರಾವ್‌ರವರು ವಿದ್ಯಾರ್ಥಿ ವೇತನದ ಕಾರ್ಯಕ್ರಮ ನೆರವೇರಿಸಿದರು. 2021–22ನೇ ಸಾಲಿನಲ್ಲಿ ರಾಜ್ಯಮಟ್ಟದಲ್ಲಿ ಅತ್ಯಧಿಕ ಅಂಕ ಪಡೆದ ಅಭಿರಾಮ್‌ನನ್ನು ವಿಶೇಷವಾಗಿ ಸನ್ಮಾನಿಸಲಾಯಿತು (620/625).




ಪ್ರತಿಷ್ಠಾನದ ಲೆಕ್ಕಪತ್ರವನ್ನು ಕಾರ್ಯದರ್ಶಿ ಶ್ರೀಯುತ ವಿಷ್ಣುಶರ್ಮ ಕೇಪು ಮಂಡಿಸಿದರು. ಆಡಿಟ್ ವರದಿಯನ್ನು ಕೋಶಾಧಿಕಾರಿಯವರಾದ ಶ್ರೀಯುತ ಹರೀಶ್ ಕುಮಾರ್ ವಿಟ್ಲ ಓದಿದರು. ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀಯುತ ಭವಾನಿಶಂಕರ ರಾಯರು ಪ್ರತಿಷ್ಠಾನದ ಕಾರ್ಯಪ್ರಗತಿಯ ಸಮಗ್ರ ವರದಿಯನ್ನು ಸಭೆಗೆ ವಿವರಿಸಿದರು. ಅಧ್ಯಕ್ಷೀಯ ಭಾಷಣದ ಮೂಲಕ ಸಭಾದ ಕಾರ್ಯಚಟುವಟಿಕೆಗಳು ಹಾಗೂ ಮುಂದೆ ಕೈಗೊಳ್ಳಬೇಕಾದ ಕೆಲಸ ಕಾರ್ಯಗಳು ಅಲ್ಲದೇ ತುರ್ತಾಗಿ ಗುರುಮಂದಿರ ನಿರ್ಮಾಣ ಕಾರ್ಯಕ್ಕೆ ವೇಗ ದೊರಕಿಸಬೇಕಾದ ಬಗ್ಗೆ ಶ್ರೀಯುತ ಕೃಷ್ಣಶರ್ಮ ಅನಾರುರವರು ಸ್ಥೂಲವಾಗಿ ವಿವರಿಸಿದರು. ಶ್ರೀಯುತ ಹರೀಶ್ ಕುಮಾರ್ ವಿಟ್ಲ ಧನ್ಯವಾದ ಸಮರ್ಪಿಸಿದರು. ಶ್ರೀಮತಿ ಚೈತ್ರಾ ನಿಕ್ಷೇಪ್‌ರವರು ಉತ್ತಮವಾಗಿ ಕಾರ್ಯಕ್ರಮ ಸಂಯೋಜನೆ ನಡೆಸಿದರು. ರಾಷ್ಟ್ರಗೀತೆ ಗಾಯನದೊಂದಿಗೆ ಮಹಾಸಭೆಗೆ ಮಂಗಳ ಹಾಡಲಾಯಿತು.

## ‘ನಮ್ಮ ಸಂಸಾರ’ ನಾಟಕ ಕೃತಿ ಲೋಕಾರ್ಪಣೆ



**ಕಾರ್ಕಳ ಜಾಗೃತಿ ಸಾಹಿತ್ಯಾಸಕ್ತ ಮಹಿಳಾ ಸಂಘಟನೆ ಹಾಗೂ ಮಕ್ಕಳ ಸಾಹಿತ್ಯ ಸಂಘ ಇವುಗಳ ಜಂಟಿ ಆಶ್ರಯದಲ್ಲಿ ಲೇಖಕಿ ಸಾವಿತ್ರಿ ಮನೋಹರ್ ಅವರ 22ನೇ ನಾಟಕ ಕೃತಿ ‘ನಮ್ಮ ಸಂಸಾರ’ ಲೋಕಾರ್ಪಣೆಗೊಳಿಸಲಾಯಿತು.**

ಜಾಗೃತಿ ಸಾಹಿತ್ಯಾಸಕ್ತ ಮಹಿಳಾ ಸಂಘಟನೆ ಹಾಗೂ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಮಕ್ಕಳ ಸಾಹಿತ್ಯ ಸಂಘದ ಆಶ್ರಯದಲ್ಲಿ ಲೇಖಕಿ ಸಾವಿತ್ರಿ ಮನೋಹರ್ ಅವರ 22ನೇ ನಾಟಕ ಕೃತಿ ‘ನಮ್ಮ ಸಂಸಾರ’ ಲೋಕಾರ್ಪಣೆಗೊಳಿಸಲಾಯಿತು.

ನಗರದ ಪ್ರಕಾಶ್ ಹೋಟೆಲ್‌ನ ಸಂಭ್ರಮ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಲೇಖಕಿ ಇಂದಿರಾ ಹಾಲಂಬಿ ಅವರು ಕೃತಿ ಅನಾವರಣಗೊಳಿಸಿ ಮಾತನಾಡಿ, ನಾಟಕದ ತುಂಬ ಹರಡಿಕೊಂಡಿರುವ ಸಾಂಸಾರಿಕ ಬಂಧ ಹೊಸ ರೂಪ ಹೊತ್ತುನಿಂತ ಸ್ತ್ರೀವಾದ ಹಾಸ್ಯಲೇಪದೊಂದಿಗೆ ಸುಖಾಂತ್ಯಗೊಂಡಿದೆ. ಇದು ಶ್ಲಾಘನೀಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಶಿಕ್ಷಣತಜ್ಞ ಡಾ. ಮಹಾಬಲೇಶ್ವರ ರಾವ್ ಮಾತನಾಡಿ, ‘ನಾಟಕದಲ್ಲಿ ವಾಸ್ತವಪ್ರಜ್ಞೆ ಹಾಸುಹೊಕ್ಕಾಗಿರುವ ರೀತಿ, ಲೇಖಕಿಯ ಬರವಣಿಗೆ ಪ್ರೀತಿ, ಸಂಸಾರವೇ ಸಾಹಿತ್ಯವಾಗುವ ನೀತಿ ನಾಟಕದ ರೂಪಕ್ಕೆ ಇಂಬು ಕೊಡುವಂತಿದೆ’ ಎಂದರು. ಮುಖ್ಯ ಅತಿಥಿ, ಮಕ್ಕಳ ಸಾಹಿತ್ಯ ಸಂಗಮದ ಕೋಶಾಧಿಕಾರಿ ಅನಂತಪದ್ಮನಾಭ ರಾವ್ ಮಾತನಾಡಿ, ‘ಸಾಹಿತ್ಯದ ಅಭಿರುಚಿ ಸಂಸಾರದ ಸೂತ್ರವನ್ನು ಗಟ್ಟಿಗೊಳಿಸುತ್ತದೆ’ ಎಂದರು.

ಮಕ್ಕಳ ಸಾಹಿತ್ಯ ಸಂಗಮ ಕಾರ್ಕಳ ಘಟಕದ ಅಧ್ಯಕ್ಷ ಶ್ರೀ ತುಕಾರಾಮ ನಾಯಕ್ ಇದ್ದರು. ಉಪಾಧ್ಯಕ್ಷೆ ಶ್ರೀಮತಿ ಜಾಹ್ನವಿ ಪ್ರಾರ್ಥಿಸಿದರು. ಲೇಖಕಿ ಶ್ರೀಮತಿ ಸಾವಿತ್ರಿ ಮನೋಹರ್ ಸ್ವಾಗತಿಸಿದರು. ಸಂಘಟನೆಯ ಅಧ್ಯಕ್ಷೆ ಶ್ರೀಮತಿ ಮಿತ್ರಪ್ರಭಾ ಹೆಗ್ಡೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀಮತಿ ಮಾಲತಿ ಜಿ. ಪೈ ನಿರೂಪಿಸಿದರು. ಶ್ರೀಮತಿ ಮನೋರಮ ಇವರು ವಂದಿಸಿದರು.

## ಪುತ್ತೂರಿನ ‘ಶಿವಸದನ’ಕ್ಕೆ ದಾನಿಗಳಿಂದ ಸಹಾಯಹಸ್ತ

ಬೆಂಗಳೂರು ನಿವಾಸಿ ನಿವೃತ್ತ BSNL ಅಧಿಕಾರಿ ಶ್ರೀಮತಿ ಅರುಂಧತಿ ಯು. ತಮ್ಮ ಸಹೋದರ ಶ್ರೀ ಸೂರ್ಯನಾರಾಯಣ ರಾವ್ ಉಬರಳೆ ಮತ್ತು ಪತಿ ಶ್ರೀ ಕುಮಾರಸ್ವಾಮಿ ಎಂ. ಎಸ್. ಸ್ಮರಣಾರ್ಥ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ ‘ಶಿವಸದನ’ ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. 1,00,000/- (ರೂಪ್ಯಾ ಒಂದು ಲಕ್ಷ) ದೇಣಿಗೆಯನ್ನು ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

ಪತ್ರಿಕೆಗೆ ಶುಭ ಬಯಸುವ–



**ಶ್ರೀ ನಾಗರಾಜ್ ಶರ್ಮ**
**ಹಾಗೂ**
**ಶ್ರೀಮತಿ ಆರತಿ ಶರ್ಮ**
‘ಶರ್ಮ’, ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
**ರವಿಕಿರಣ್ ಕ್ಯೊಲ,** ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

*Sri Hari Adyapady*
*Proprietor*



Ph : 0824-2251597 (R)
2252119 (O)
Mobile : 9448344612
9964072489
**SHIVA ELECTRICALS**
2nd Floor, Ozanam Complex, Church Building
Main Road, BAJPE, MANGALORE



*We undertake all types of Electrical, Plumbing and Sanitary works*

## ರೋಟರಿ ಕ್ಲಬ್ ಹಿಲ್‌ಸೈಡ್‌ನ ಅಧ್ಯಕ್ಷರಾಗಿ ಶ್ರೀ ಕಿರಣ್ ಕುಮಾರ್ ಎಂ. ಆಯ್ಕೆ




ಮಂಗಳೂರಿನ ಶ್ರೀ ಕಿರಣ್ ಕುಮಾರ್ ಎಂ. ಇವರು 2023-24ನೇ ಸಾಲಿನ ರೋಟರಿ ಕ್ಲಬ್ ಹಿಲ್‌ಸೈಡ್‌ನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಶ್ರೀ ಮನೀಶ್ ರಾವ್ ಯು. ಮುಂದಿನ ಸಾಲಿನ ಅಧ್ಯಕ್ಷರಾಗಿ ಹಾಗೂ ಶ್ರೀ ಪ್ರವೀಣ್‌ಚಂದ್ರ ಶರ್ಮ Zonal Lieutenant ಆಗಿ ಆಯ್ಕೆಯಾಗಿದ್ದಾರೆ.





**3,4,5 & 6 BHK Luxury homes at the heart of Mangalore**

**Live the vacation life!**

Bookings open now

**8882 777 444**

SHIVABAGH
*KADRI*

Land® Trades
BUILDERS & DEVELOPERS
BUILDING TRUST,DELIVERING VALUE


Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher : Sri Harsha Kumar Kedige, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3*
*Editor : Sri M. S. Raghunath Rao, Darbe, Puttur* *Printed at : Rajesh Power Press, Darbe - 574 202, Puttur, D. K.*